ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	799
ಸದಸ್ಯರ ಹೆಸರು	:	ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	20.12.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಒಟ್ಟು ಎಷ್ಟು ಕಡೆ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲಾಗಿದೆ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)	2018–19ನೇ ಸಾಲಿನಲ್ಲಿ 176, 2019–20ನೇ ಸಾಲಿನಲ್ಲಿ 100 ಕರ್ನಾಟಕ ಪಬ್ಲಿಕ್ ಶಾಲೆಗಳು ಸೇರಿದಂತೆ **ಒಟ್ಟು 276** ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ರಾಜ್ಯಾದ್ಯಂತ ಪ್ರಾರಂಭಿಸಲಾಗಿದೆ. (ಜಿಲ್ಲಾವಾರು, ತಾಲ್ಲೂಕುವಾರು ಶಾಲಾ ಪಟ್ಟಿಯನ್ನು **ಅನುಬಂಧ–1** ರಲ್ಲಿ ಒದಗಿಸಿದೆ.)
ಆ)	ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ವಿಶೇಷವಾಗಿ ಯಾವ ರೀತಿಯ ಶಿಕ್ಷಣವನ್ನು ಬೋಧನೆ ಮಾಡಲಾಗುತ್ತಿದೆ?	ಪೂರ್ವ ಪ್ರಾಥಮಿಕ ವಿಭಾಗದಿಂದ ಪದವಿ ಪೂರ್ವ ವಿಭಾಗದವರೆಗೂ ಒಂದೇ ಸೂರಿನಡಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ನೀಡಲಾಗುತ್ತಿದೆ. ಈ ಶಾಲೆಗಳಲ್ಲಿ ರಾಜ್ಯ ಪಠ್ಯಕ್ರಮವನ್ನು **ಕನ್ನಡ ಮತ್ತು ಆಂಗ್ಲ ಮಾಧ್ಯಮ (ದ್ವಿ–ಭಾಷಾ ಮಾಧ್ಯಮ)** ಎರಡರಲ್ಲೂ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲಾಗುತ್ತಿದೆ.
ಇ)	ಇದುವರೆಗೆ ಪ್ರಾರಂಭಿಸಲಾಗಿರುವ ಎಲ್ಲಾ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಸಂಪೂರ್ಣವಾಗಿ ಸರ್ಕಾರದಿಂದಲೇ ನಿರ್ವಹಿಸಲಾಗುತ್ತಿಯೇ; ಅಥವಾ ಖಾಸಗಿಯವರ ಸಹಭಾಗಿತ್ವದಿಂದ ನಿರ್ವಹಿಸಲಾಗುತ್ತಿದೆಯೇ ?	• ಇದುವರೆಗೆ ಪ್ರಾರಂಭಿಸಲಾಗಿರುವ ಎಲ್ಲಾ 276 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಸಂಪೂರ್ಣವಾಗಿ ಸರ್ಕಾರದಿಂದಲೇ ನಿರ್ವಹಿಸಲಾಗುತ್ತಿದೆ. • ಸರ್ಕಾರದ ಆಶಯ ಮತ್ತು ನೀತಿಗೆ ಕ್ರಿಯಾಶೀಲ ಸಮುದಾಯದ ಸಹಭಾಗಿತ್ವದಲ್ಲಿ ಉತ್ತಮ ಗುಣಮಟ್ಟದ ಕಲಿಕೆಯನ್ನು ಒದಗಿಸಲು ಬೆಂಬಲಿಸುವ ಖಾಸಗಿ ಸಂಸ್ಥೆಗಳನ್ನು ಮಾತ್ರ ಪರಿಗಣಿಸಲಾಗುವುದು. • ಆಸಕ್ತ ಎನ್.ಜಿ.ಒಗಳು, ಕಾರ್ಪೊರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ದಾನಿಗಳು, ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸಲು ಇಚ್ಛಿಸಿದಲ್ಲಿ, ಪ್ರಸ್ತುತ ಇರುವ ಸರ್ಕಾರಿ ಶಾಲೆಗಳನ್ನು ಕೆ.ಪಿ.ಎಸ್ ಶಾಲೆಗಳನ್ನಾಗಿ ಪರಿವರ್ತಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 204 ಪಿಎಂಸಿ 2021, ದಿನಾಂಕ:25.10.2021 ರಲ್ಲಿ ಅವಕಾಶ ಕಲ್ಪಿಸಲಾಗಿದೆ. **(ಸುತ್ತೋಲೆ ಪ್ರತಿಯನ್ನು**

		ಅನುಬಂಧ-2ರಲ್ಲಿ ಒದಗಿಸಲಾಗಿದೆ)
ಈ)	ಪ್ರಸಕ್ತ ಸಾಲಿನಿಂದ ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಖಾಸಗಿಯವರಿಗೆ ವಹಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?	• ಆಸಕ್ತ ಎನ್.ಜಿ.ಒಗಳು, ಕಾರ್ಪೋರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ದಾನಿಗಳು, ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸಲು ಇಚ್ಚಿಸಿದಲ್ಲಿ, ಪ್ರಸ್ತುತ ಇರುವ ಸರ್ಕಾರಿ ಶಾಲೆಗಳನ್ನು ಕೆ.ಪಿ.ಎಸ್ ಶಾಲೆಗಳನ್ನಾಗಿ ಪರಿವರ್ತಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 204 ಪಿಎಂಸಿ 2021, ದಿನಾಂಕ:25.10.2021 ರಲ್ಲಿ ಅವಕಾಶ ಕಲ್ಪಿಸಲಾಗಿದೆ **(ಸುತ್ತೋಲೆ ಪ್ರತಿಯನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ).**
ಉ)	ಹಾಗಿದ್ದಲ್ಲಿ, ಪೂರ್ಣವಾಗಿ ಖಾಸಗಿಯವರಿಂದ ಅಭಿವೃದ್ಧಿ ಪಡಿಸಲಾದ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಲಭ್ಯವಾಗುವುದನ್ನು ಖಾತರಿ ಪಡಿಸಿಕೊಳ್ಳಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು?	ರಾಜ್ಯದಲ್ಲಿ ಪ್ರಸ್ತುತ ಇದುವರೆವಿಗೂ ಪೂರ್ಣವಾಗಿ ಖಾಸಗಿಯವರಿಂದ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಅಭಿವೃದ್ಧಿಪಡಿಸಿರುವುದಿಲ್ಲ. • ಸರ್ಕಾರದ ಆಶಯ ಮತ್ತು ನೀತಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಕಲಿಕೆಯನ್ನು ಒದಗಿಸಲು ಬೆಂಬಲಿಸುವ ಖಾಸಗಿ ಸಂಸ್ಥೆಗಳನ್ನು ಪ್ರೋತ್ಸಾಹಿಸಿ ಸಿ.ಎಸ್.ಆರ್ ನಿಧಿಯನ್ನು ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ಸಮರ್ಪಕವಾಗಿ ಬಳಸಿಕೊಳ್ಳಲಾಗುವುದು. ಮುಂದುವರೆದು, ಕೆ.ಪಿ.ಎಸ್ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡುವ ಜವಾಬ್ದಾರಿ ಹಾಗೂ ಮೇಲ್ವಿಚಾರಣೆಯ ಪಾತ್ರವನ್ನು ಶಿಕ್ಷಣ ಇಲಾಖೆಯೇ ನಿರ್ವಹಿಸುತ್ತದೆ. • ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 204 ಪಿಎಂಸಿ 2021 ದಿ: 25.10.2021ರಲ್ಲಿ ಹೊಸ ಕೆ.ಪಿ.ಎಸ್ ಶಾಲೆಗಳನ್ನು ಪ್ರಾರಂಭಿಸಲು ಕೆಲವೊಂದು ಮಾನದಂಡಗಳನ್ನು ನಿಗದಿಪಡಿಸಿದ್ದು, ಸದರಿ ಮಾನದಂಡಗಳಿಗೆ ಬದ್ಧರಾಗಿರುವ ಎನ್.ಜಿ.ಒ.ಗಳು, ಕಾರ್ಪೋರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ದಾನಿಗಳಿಗೆ ಮಾತ್ರ ಕೆ.ಪಿ.ಎಸ್ ಶಾಲೆಗಳನ್ನು ಅಭಿವೃದ್ಧಿಪಡಿಸಲು ಅನುಮತಿ ನೀಡಲಾಗುತ್ತಿದೆ **(ಸುತ್ತೋಲೆ ಪ್ರತಿಯನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ).**

ಇಪಿ: 55 ಎಂಪಿಇ 2021

(ಬಿ.ಸಿ.ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

LGQ-799

ಅನುಬಂಧ-1

276 KPS Schools List

Sl.No.	District	Block	K P S School Name
1	2	3	5
1	BAGALKOT	BADAMI	KPS NEERBUDIHAAL
2	BAGALKOT	BADAMI	KPS MUSTIGERI
3	BAGALKOT	BAGALKOT	KPS MUGALOLLI
4	BAGALKOT	BILAGI	KPS ROLLI
5	BAGALKOT	HUNAGUNDA	KPS DHANNUR
6	BAGALKOT	JHAMAKANDI	KPS MAIGUR
7	BAGALKOT	JHAMAKANDI	KPS NAVALGI
8	BAGALKOT	MUDHOL	KPS YADAHALLI
9	BANGALORE U SOUTH	ANEKAL	KPS ANEKAL
10	BANGALORE U SOUTH	SOUTH-1	KPS KAGGALIPURA
11	BANGALORE U SOUTH	SOUTH-1	KPS UTTARAHALLI
12	BANGALORE U SOUTH	SOUTH-1	KPS HONNAGANAHATTI
13	BANGALORE U SOUTH	SOUTH-1	KPS BASAVANAGUDI
14	BANGALORE U SOUTH	SOUTH-2	KPS CHAMARAJPETE (OLD FORT)
15	BANGALORE U SOUTH	SOUTH-2	KPS MARENAHALLI
16	BANGALORE U SOUTH	SOUTH-2	KPS ATTIGUPPE
17	BANGALORE U SOUTH	SOUTH-3	KPS AGARA
18	BANGALORE U SOUTH	SOUTH-3	KPS ADUGODI
19	BANGALORE U SOUTH	SOUTH-3	KPS VANIVILAS V V PURAM
20	BANGALORE U SOUTH	SOUTH-3	KPS YADIYUR
21	BANGALORE U SOUTH	SOUTH-3	KPS DOMMALUR
22	BANGALORE U SOUTH	SOUTH-4	KPS JEEVANABHIMANAGARA
23	BANGALORE U SOUTH	SOUTH-4	KPS K.R. PURAM
24	BANGALORE U SOUTH	SOUTH-4	KPS SARAKKI
25	BANGALORE U SOUTH	SOUTH-4	KPS VARTHUR
26	BANGALORE RURAL	DEVANAHALLY	KPS VISHWANATHAPURA
27	BANGALORE RURAL	DODDABALLAPURA	KPS DODDABELAVANGALA
28	BANGALORE RURAL	HOSAKOTE	KPS NANDAGUDI
29	BANGALORE RURAL	NELMANGALA	KPS THYAMGONDLU
30	BANGALORE U NORTH	NORTH -4	KPS, BAGALUR
31	BANGALORE U NORTH	North1, Rajajingara	KPS KRISHNANANDA NAGARA
32	BANGALORE U NORTH	North1, Rajajingara	KPS HEGGANHALLI
33	BANGALORE U NORTH	North2, Malleshwaram	KPS SHESHADRIPURAM
34	BANGALORE U NORTH	North2, Malleshwaram	KPS HEBBALA
35	BANGALORE U NORTH	North2, Malleshwaram	KPS MALLESHWARAM
36	BANGALORE U NORTH	North2, Malleshwaram	KPS JALAHALLI
37	BANGALORE U NORTH	North3 Shivajinagara	KPS DJ HALLI
38	BANGALORE U NORTH	North3 Shivajinagara	KPS Vasanthanagar
39	BANGALORE U NORTH	North3 Shivajinagara	KPS Doddabanasavadi
40	BANGALORE U NORTH	North4, Yelahanka	KPS KODIGEHALLI

41	BELGAUM	Belgaum City	KPS RAMTEERH NAGAR
42	BELGAUM	Belgaum City	KPS VADAGOAN
43	BELGAUM	KHANAPURA	KPS MUGALIHALA
44	BELGAUM	KITTUR	KPS HUNASIKATTI
45	BELGAUM	RAMADURGA	KPS KATKOLA
46	BELGAUM	RURAL AREA	KPS K.K KOPPA
47	BELGAUM	SAVADATTI	KPS YAKKUNDI
48	BELGAUM	SAVADATTI	KPS SATTIGERI
49	BELGAUM CHIKKODI	ATHANI	KPS NADHI INGALAGA
50	BELGAUM CHIKKODI	CHIKKODI	KPS KEROORU
51	BELGAUM CHIKKODI	GOKAK	KPS KHANGOAN
52	BELGAUM CHIKKODI	HUKKERI	KPS YARAGATTI
53	BELGAUM CHIKKODI	HUKKERI	KPS U-KHANAPUR
54	BELGAUM CHIKKODI	Kagwad	KPS MANGASULI
55	BELGAUM CHIKKODI	Mudalgi	KPS.KOUJALAGI
56	BELGAUM CHIKKODI	Nippani	KPS NIPPANI
57	BELGAUM CHIKKODI	RAIBAG	KPS RAIBAG
58	BELGAUM CHIKKODI	RAIBAG	KPS NILAJI
59	BELLARY	BELLARY	KPS EMMIGANURU
60	BELLARY	Bellary East	KPS MOKA
61	BELLARY	Bellary East	KPS BELLARY
62	BELLARY	HADAGALI	KPS HIREHADAGALI
63	BELLARY	HAGARIBOMMANAHALLI	KPS KOGALI
64	BELLARY	HOSAPETE	KPS GADIGANURU
65	BELLARY	KUDLIGI	KPS GUDEKOTE
66	BELLARY	SANDURU	KPS BANDRI
67	BELLARY	SIRAGUPPA	KPS HACHHOLLI
68	BIDAR	AURAD	KPS KUSHANURU
69	BIDAR	BASAVAKALYANA	KPS MANTALA
70	BIDAR	BHALKI	KPS HALBURGA
71	BIDAR	BIDAR	KPS MANNAHALLI
72	BIDAR	BIDAR	KPS RAO TALEEM BIDAR
73	BIDAR	HUMANABADA	KPS BEMALKHEDA
74	CHAMARAJANAGARA	CHAMARAJANAGARA	KPS CHANDAKAVADI
75	CHAMARAJANAGARA	GUNDLUPETE	KPS HANGALA
76	CHAMARAJANAGARA	KOLLEGALA	KPS LOKKANAHALLI
77	CHAMARAJANAGARA	YELANDURU	KPS YALANDHURU
78	CHIKKABALLAPURA	BAGEPALLI	KPS CHELUR
79	CHIKKABALLAPURA	CHIKKABALLAPURA	KPS MANDIKAL
80	CHIKKABALLAPURA	CHINTAMANI	KPS KAIWAR
81	CHIKKABALLAPURA	GOWRIBIDANUR	KPS PALYA
82	CHIKKABALLAPURA	GUDIBANDE	KPS GUDIBANDE
83	CHIKKABALLAPURA	SHIDLAGATTA	KPS BASHETHALLY
84	CHIKKAMAGALURU	CHIKMAGALURU	KPS KALASAPURA
85	CHIKKAMAGALURU	KADURU	KPS CHOWLAHIRIYURU
86	CHIKKAMAGALURU	KOPPA	KPS KOPPA
87	CHIKKAMAGALURU	MUDIGERE	KPS KALASA
88	CHIKKAMAGALURU	N.R PURA	KPS N.R PURA
89	CHIKKAMAGALURU	SHRUNGERI	KPS BEGARU

90	CHIKKAMAGALURU	THARIKERE	KPS SHIVANI
91	CHIKKAMAGALURU	THARIKERE	KPS RANGENAHLLI
92	CHITRADURGA	CHALLAKERE	KPS PARASHURAMAPURA
93	CHITRADURGA	CHITRADURGA	KPS ANNEHAL JANPANNANAHATTI
94	CHITRADURGA	HIRIYURU	KPS HOSAYALANADU
95	CHITRADURGA	HIRIYURU	KPS MARADIHALLI
96	CHITRADURGA	HOLALKERE	KPS KASHIPURA
97	CHITRADURGA	HOSADURGA	KPS SHIRIRAMAPURA
98	CHITRADURGA	MOLAKALMURU	KPS, B.G KERE
99	DAKSHINAKANNADA	BANTVALA	KPS KANYANA
100	DAKSHINAKANNADA	BANTVALA	KPS MONTEPADAV
101	DAKSHINAKANNADA	BELTHANGADI	KPS PUNJALAKATTE
102	DAKSHINAKANNADA	MANGALURU	KPS MUTTURU
103	DAKSHINAKANNADA	MOODABIDRE	KPS MIJAR
104	DAKSHINAKANNADA	PUTTURU	KPS KEYYURU
105	DAKSHINAKANNADA	PUTTURU	KPS KUMBRA
106	DAKSHINAKANNADA	SULLIA	KPS GANDHINAGARA
107	DAKSHINAKANNADA	SULYA	KPS, BELLARE
108	DAVANAGERE	CHANNAGIRI	KPS SANTHEBENNURU
109	DAVANAGERE	CHANNAGIRI	KPS THYAVANIGE
110	DAVANAGERE	DAVANAGERE (N)	KPS DODDABATHI
111	DAVANAGERE	DAVANAGERE (N)	KPS KUKKWADA
112	DAVANAGERE	DAVANAGERE SOUTH	KPS MAYAKONDA
113	DAVANAGERE	HARAPANAHALLI	KPS HALUVAGALU
114	DAVANAGERE	HARIHARA	KPS BANUVALLI
115	DAVANAGERE	HARIHARA	KPS BANNIKODU
116	DAVANAGERE	HONNALI	KPS NYAMATI
117	DAVANAGERE	HONNALI	KPS SASVEHALLI
118	DAVANAGERE	JAGALURU	KPS BILICHODU
119	DHARWAD	DARAVADA RURAL	KPS KARADIGUDDA
120	DHARWAD	HDMC	KPS BIDNAL
121	DHARWAD	HUBBALLI RURAL	KPS RAYANALA
122	DHARWAD	HUBLI	KPS NAVANGAR
123	DHARWAD	HUBLI	KPS GOPANAKOPPA
124	DHARWAD	KALAGHATAGI	KPS BAMMIGATTI
125	DHARWAD	KUNDAGOLA	KPS GUDAGERI
126	DHARWAD	NAVALAGUNDA	KPS SHELAVADI
127	GADAG	GADAG RURAL	KPS SORATURU
128	GADAG	MUNDARAGI	KPS DONI
129	GADAG	NARGUNDA	KPS BANAHATTI
130	GADAG	NARGUNDA	KPS CHIKKANARAGUND
131	GADAG	RONA	KPS MUSHIGERI
132	GADAG	SHIRAHATTI	KPS BILLATTI
133	GADAG	SHIRAHATTI	KPS KADAKOL
134	HASSAN	ALURU	KPS RAYARAKOPPALLU
135	HASSAN	ARAKALAGUDU	KPS BASAVAPATTANA
136	HASSAN	ARASIKERE	KPS CHINDHENAHALLI
137	HASSAN	BELURU	KPS HALEBEEDU
138	HASSAN	CHANNARAYANAPATNA	KPS NUGGENAHALLI

139	HASSAN	HASSAN	KPS MOSALEHOSAHALLI
140	HASSAN	HASSAN	KPS BAILAHALLI
141	HASSAN	HOLENARASIPURA	KPS HARIHARAPURA
142	HASSAN	SAKALESHPURA	KPS HETHURU
143	HASSAN	SAKALESHPURA	KPS HANBALU
144	HAVERI	BYADAGI	KPS BYADAGI
145	HAVERI	HANAGALLA	KPS ADURA
146	HAVERI	HAVERI	KPS KARAJAGI
147	HAVERI	HIREKERURU	KPS NULAGERI
148	HAVERI	RANEBENNUR	KPS AREMALLAPURA
149	HAVERI	SAVANURU	KPS SAVANURU
150	HAVERI	SHIGGANV	KPS NARAYANAPURA
151	KALABURAGI	AFZALPURA	KPS KARAJAGI
152	KALABURAGI	ALANDA	KPS MADANAHIPPARAGI
153	KALABURAGI	CHINCHOLI	KPS SULEPETH
154	KALABURAGI	CHINCHOLI	KPS CHANDAPUR, CHINCHOLI
155	KALABURAGI	CHITTAPURA	KPS MADBOOLA
156	KALABURAGI	JEVARAGI	KPS YADRAMI
157	KALABURAGI	KALABURAGI NORTH	KPS AURAD
158	KALABURAGI	KALABURAGI NORTH	KPS MAHATMA BASAVESWAR NAGAR
159	KALABURAGI	KALABURAGI NORTH	KPS MADINA COLONY MSKMILL GLB
160	KALABURAGI	SEDAM	KPS MUDHOL
161	KODAGU	MADIKERI	KPS NAPOKLU
162	KODAGU	SOMAVARAPETE	KPS NELLIHUDIKERI
163	KODAGU	VIRAJPETE	KPS PONNAMPETE
164	KOLAR	BANGARPET	KPS BOODIKOTE
165	KOLAR	K.G.F	KPS SUNDARPALYA
166	KOLAR	KOLAR	KPS NARASAPURA
167	KOLAR	KOLAR	KPS KYALANUR
168	KOLAR	MALUR	KPS MASTI
169	KOLAR	MULABAGILU	KPS AVANI
170	KOLAR	SRINIVASPURA	KPS SOMAYAJALAHALLI
171	KOPPAL	GANGAVATHI	KPS KANAKAGIRI
172	KOPPAL	GANGAVATI	KPS KARATAGI
173	KOPPAL	KOPPAL	KPS HIRESINDOGI
174	KOPPAL	KOPPAL	KPS IRKALGADA
175	KOPPAL	KUSTAGI	KPS HANAMASAGARA
176	KOPPAL	KUSTAGI	KPS TAWARAGERA
177	KOPPAL	YALABURGA	KPS BANDI
178	KOPPAL	YALABURGA	KPS MANGALORE
179	MANDYA	KRISHNARAJA PETE	KPS KR. PET
180	MANDYA	KRISHNARAJAPETE	KPS KIKKERI
181	MANDYA	MADDURU	KPS BESAGARALLI
182	MANDYA	MALAVALLI	KPS HALAGURU
183	MANDYA	MANDYA	KPS BASARALU
184	MANDYA	MANDYA SOUTH	KPS GUTHAL COLONY ARAKESWARA NAGARA
185	MANDYA	NAGAMANGALA	KPS DEVALAPURA
186	MANDYA	PANDAVAPURA	KPS CHINAKURALI
187	MANDYA	SHRIRANGAPATNA	KPS ARAKERE

188	MYSORE	H.D KOTE	KPS B.MATTAKERE
189	MYSORE	HUNASURU	KPS GAVADAGERE
190	MYSORE	KR NAGARA	KPS HEBBALU
191	MYSORE	MYSORE NORTH	KPS RAJENDRANAGARA
192	MYSORE	MYSORE RURAL	KPS SIDDARAMANAHUNDI
193	MYSORE	MYSORE RURAL	KPS MANCHE GOWDANA.KOPPALU
194	MYSORE	MYSORE RURAL	KPS YELWALA
195	MYSORE	MYSORE SOUTH	KPS KUVEMPUNAGAR
196	MYSORE	NANJANAGUDU	KPS HEMMARAGALA
197	MYSORE	PERIYAPATNA	KPS HARANA HALLI
198	MYSORE	PERIYAPATNA	KPS RAVANDURU
199	MYSORE	T.NARSIPURA	KPS MUGURU
200	RAICHUR	DEVADURGA	KPS DEVADURGA
201	RAICHUR	LINGASUGURU	KPS KHYRAVADAGI
202	RAICHUR	MANAVI	KPS BYAGAVAT
203	RAICHUR	MANAVI	KPS Maski
204	RAICHUR	RAICHUR	KPS MATAMARI
205	RAICHUR	RAICHUR	KPS YAPALADINNI
206	RAICHUR	RAICHUR	KPS Munnurwadi
207	RAICHUR	SINDHANURU	KPS JAVALAGERA
208	RAICHUR	SINDHANURU	KPS AMBAMAT
209	RAMANAGARA	CHANPATNA	KPS ARALALUSANDRA
210	RAMANAGARA	KANAKAPURA	KPS HAROHALLI
211	RAMANAGARA	KANAKAPURA	KPS DODDALAHALLI
212	RAMANAGARA	MAGADI	KPS KUDURU
213	RAMANAGARA	MAGADI	KPS THIPPASANDRA
214	RAMANAGARA	RAMANAGARA	KPS AVVERAHALLI
215	SHIMOGA	BADRAVATHI	KPS ANTHARAGANGE
216	SHIMOGA	HOSANAGARA	KPS AMRUTHA
217	SHIMOGA	SAGARA	KPS ANANDAPURA
218	SHIMOGA	SHIKARIPURA	KPS SHIRALAKOPPA
219	SHIMOGA	SHIKARIPURA	KPS HITTALA
220	SHIMOGA	SHIMOGA	KPS K R PURAM SHIMOGA
221	SHIMOGA	SHIMOGA	KPS SHETTIHALLI
222	SHIMOGA	SHIMOGA	KPS GAJANURU
223	SHIMOGA	SORABA	KPS AANAVATTI
224	SHIMOGA	THIRTHAHALLI	KPS KONANDHURU
225	TUMKUR	CHIKKANAYAKANAHALLI	KPS GPUC HULIYARU
226	TUMKUR	GUBBI	KPS KADABA
227	TUMKUR	GUBBI	KPS C S PURA
228	TUMKUR	KUNIGAL	KPS AMRUTHUR
229	TUMKUR	KUNIGAL	KPS HALE PETE
230	TUMKUR	THURUVEKERE	KPS DHANDINASHIVARI
231	TUMKUR	TIPATURU	GHS HONNAVALLI
232	TUMKUR	TIPATURU	KPS NONAVINAKERE
233	TUMKUR	TUMKUR	KPS NAGAVALLI
234	TUMKUR	TUMKUR	KPS BELLAVI
235	TUMKUR	TUMKUR	KPS EMPRESS TUMAKURU
236	TUMKUR MADHUGIRI	KORATAGERE	KPS IRAKASANDRA COLONY

237	TUMKUR MADHUGIRI	KORATAGERE	KPS HOLAVANAHALLI
238	TUMKUR MADHUGIRI	MADHUGIRI	KPS MIDIGESHI
239	TUMKUR MADHUGIRI	PAVAGADA	KPS KOTAGUDDA
240	TUMKUR MADHUGIRI	PAVAGADA	KPS THIRUMANI
241	TUMKUR MADHUGIRI	SHIRA	KPS CHIKKANAHALLI
242	TUMKUR MADHUGIRI	SHIRA	KPS PATTANAYAKANAHALLI
243	UDUPI	BRAHMAVARA	KPS KOKKARNE
244	UDUPI	BYNDOOR	KPS VANDSE
245	UDUPI	KAAPU	KPS PADUBIDRI
246	UDUPI	KARKALA	KPS MUNIYALU
247	UDUPI	KARKALA	KPS HOSMARU EEDU
248	UDUPI	KUNDAPURA	KPS BIDALKATTE
249	UDUPI	KUNDAPURA	KPS KOTESHWARA
250	UDUPI	UDUPI	KPS HIRIYADAKA
251	UTTARA KANNADA	ANKOLA	KPS AGASURU
252	UTTARA KANNADA	BHATKALA	KPS TERNAMAKKI
253	UTTARA KANNADA	BHATKALA	KPS BAILUR
254	UTTARA KANNADA	HONNAVARA	KPS MANKI
255	UTTARA KANNADA	KARAVARA	KPS SHIRAVADI
256	UTTARA KANNADA	KARAVARA	KPS AMADALLI
257	UTTARA KANNADA	KUMATA	KPS NELLIKERI
258	UTTARA KANNADA	KUMATA	KPS SANTEGULI
259	UTTARAKANNADA SIRSI	HALIYALA	KPS MURKVADA
260	UTTARAKANNADA SIRSI	MUNDAGOD	KPS MALAGI
261	UTTARAKANNADA SIRSI	SIDDAPURA	KPS HALAGERI
262	UTTARAKANNADA SIRSI	SIRSI	KPS BILUR
263	UTTARAKANNADA SIRSI	YALLAPURA	KPS KIRUVATTI
264	VIJAYAPURA	BASAVA BAGEVADI	KPS KUDAGI
265	VIJAYAPURA	CHADACHANA	KPS BARADOLA
266	VIJAYAPURA	INDI	KPS HALAGUNAKI
267	VIJAYAPURA	MUDDEBIHALA	KPS RAKKASAGI
268	VIJAYAPURA	SINDAGI	KPS YANKANCHI
269	VIJAYAPURA	SINDAGI	KPS JALAWAD
270	VIJAYAPURA	VIJAYAPURA CITY	KPS Gandhichowk
271	VIJAYAPURA	VIJAYAPURA RURAL	KPS NAGATHAN
272	VIJAYAPURA	VIJAYAPURA RURAL	KPS ARJUNAGI
273	VIJAYAPURA	VIJAYAPURA RURAL	KPS MAMADAPURA
274	YADGIRI	SHAHAPURA	KPS SAGARA
275	YADGIRI	SURAPURA	KPS RANGAMPET
276	YADGIRI	YADGIRI	KPS GAJARKOTA

ಅನುಬಂಧ - 2 LCQ-799

ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 204 ಪಿಎಂಸಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:25-10-2021

ಸುತ್ತೋಲೆ

ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವಲ್ಲಿ ಸರ್ಕಾರದ ಜವಾಬ್ದಾರಿಯೊಂದಿಗೆ ಸಮುದಾಯದ ಪಾತ್ರವೂ ಅಷ್ಟೇ ಮಹತ್ವದ್ದಾಗಿರುತ್ತದೆ. ಸರ್ಕಾರವು ಸೀಮಿತ ಸಂಪನ್ಮೂಲಗಳ ಮಿತಿಯಲ್ಲಿ ಶಾಲೆಗಳಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಕ್ರಿಯಾಶೀಲ ಸಮುದಾಯವು ಸರ್ಕಾರದೊಂದಿಗೆ ಕೈಜೋಡಿಸಿದಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸುವ ಶಾಲೆಗಳನ್ನು ಇನ್ನಷ್ಟು ಬಲಪಡಿಸಬಹುದಾಗಿರುತ್ತದೆ. ಈ ನಿಟ್ಟಿನಲ್ಲಿ ಸಮುದಾಯದ ಸಹಕಾರ ಮತ್ತು ಬೆಂಬಲವನ್ನು ಸರ್ಕಾರವು ಅಪೇಕ್ಷಿಸುತ್ತದೆ.

ಪೂರ್ವ ಪ್ರಾಥಮಿಕದಿಂದ 12ನೇ ತರಗತಿಯವರೆಗೆ ಒಂದೇ ಸೂರಿನಡಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಪ್ರಾರಂಭಿಸಲಾಗಿರುವ ಕೆ.ಪಿ.ಎಸ್ ಶಾಲೆಗಳು ಸಮುದಾಯವನ್ನು ಆಕರ್ಷಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಸಮುದಾಯದ ಭಾಗವಾಗಿರುವ ಎನ್.ಜಿ.ಓ. ಗಳು ಕಾರ್ಪೋರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಶಿಕ್ಷಣಾಸಕ್ತರು ಕೆ.ಪಿ.ಎಸ್ ಶಾಲೆಗಳ ಬಲವರ್ಧನೆಯ ಕಾರ್ಯದಲ್ಲಿ ಪಾಲ್ಗೊಳ್ಳಲು ಬಯಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಪ್ರಾರಂಭಿಸಲಾಗಿರುವ 276 ಕೆ.ಪಿ.ಎಸ್ ಶಾಲೆಗಳ ಸಂಖ್ಯೆಯನ್ನು ಇನ್ನಷ್ಟು ವಿಸ್ತರಿಸುವ ಕುರಿತು ಸರ್ಕಾರ ಗಂಭೀರ ಚಿಂತನೆ ನಡೆಸಿ ಹಾಲಿಯಿರುವ ಸರ್ಕಾರಿ ಶಾಲೆಗಳಿಗೆ ಆರ್ಥಿಕ ಮತ್ತು ಶೈಕ್ಷಣಿಕ ಸೌಲಭ್ಯ ಒದಗಿಸುವುದರ ಮೂಲಕ ಉತ್ತಮ ಗುಣಮಟ್ಟದ ಮೂಲ ಸೌಕರ್ಯಗಳನ್ನು, ಕಲಿಕಾ ವಾತಾವರಣವನ್ನು ನಿರ್ಮಿಸುವ ಮೂಲಕ ಕೆ.ಪಿ.ಎಸ್ ಶಾಲೆಗಳನ್ನಾಗಿ ಪರಿವರ್ತಿಸಲು ಜನಪ್ರತಿನಿಧಿಗಳು, ಎನ್.ಜಿ.ಓ. ಗಳು, ಕಾರ್ಪೋರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಶಿಕ್ಷಣಾಸಕ್ತ ದಾನಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿರುತ್ತದೆ. ಸರ್ಕಾರವು ಪ್ರಸ್ತುತ ಕೆ.ಪಿ.ಎಸ್ ಶಾಲೆಗಳನ್ನಾಗಿ ಪರಿವರ್ತಿಸಲು ಇರುವ ನಿಯಮಗಳನುಸಾರ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತದೆ.

ಹೊಸ ಕೆ.ಪಿ.ಎಸ್ ಶಾಲೆಗಳನ್ನು ಪ್ರಾರಂಭಿಸಲು ಆಸಕ್ತಿ ಇರುವ ಎನ್.ಜಿ.ಓ. ಗಳು, ಕಾರ್ಪೋರೇಟ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಆಸಕ್ತ ದಾನಿಗಳು ಶಾಲೆಗಳನ್ನು ಪ್ರಾರಂಭಿಸಲು ಶಾಲೆಗಳ ಆಯ್ಕೆಗೆ ಮಾನದಂಡಗಳು:-

1. ಅನುದಾನಿತ/ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಆಯ್ಕೆಗೆ ಪರಿಗಣಿಸಬಾರದು.

1905
27 OCT 2021

2. ಆದಷ್ಟೂ ಒಂದೇ ಆವರಣದಲ್ಲಿ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿರಬೇಕು.
3. ಒಂದೇ ಆವರಣದಲ್ಲಿ ಕಾರ್ಯನಿರ್ವಹಿಸದಿರುವ ಆದರೆ ಅದೇ ಗ್ರಾಮ/ಪಟ್ಟಣ/ನಗರದ ಸಮೀಪದಲ್ಲಿ ಕಾರ್ಯನಿರ್ವಹಿಸುವ (ಸುಮಾರು 500 ಮೀ ಅಂತರ) ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಆಯ್ಕೆ ಮಾಡುವುದು.
4. ಕ್ರ.ಸಂ 2 ಮತ್ತು 3ರಂತೆ ಶಾಲೆಗಳು ಲಭ್ಯವಿಲ್ಲದಿದ್ದಲ್ಲಿ, ಒಂದೇ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆಯನ್ನು ಆಯ್ಕೆಗೆ ಪರಿಗಣಿಸುವುದು.
5. ಒಟ್ಟು ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ 500 ಕ್ಕಿಂತ ಹೆಚ್ಚಾಗಿರುವ ಶಾಲೆಗಳನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡುವುದು.
6. ನಗರ ಪ್ರದೇಶದಲ್ಲಿ ಸೂಕ್ತ ಸ್ಥಳಾವಕಾಶ/ಆವರಣವನ್ನು ಹೊಂದಿರುವ ಶಾಲೆಗಳು ಮತ್ತು ಗ್ರಾಮ/ಪಟ್ಟಣ ಪ್ರದೇಶಗಳಲ್ಲಿ ಕನಿಷ್ಠ 3–5 ಎಕರೆ ಜಾಗವನ್ನು ಹೊಂದಿರುವ ಶಾಲೆಗಳನ್ನು ಆಯ್ಕೆ ಮಾಡುವುದು.
7. ಈಗಾಗಲೇ ಕೆಪಿಎಸ್ ಪ್ರಾರಂಭವಾಗಿರುವ ಗ್ರಾಮ/ಹೋಬಳಿಗಳನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿರುವ ಶಾಲೆಗಳನ್ನು ಆಯ್ಕೆ ಮಾಡುವುದು.
8. ಗುರುತಿಸಲಾದ ಶಾಲೆಗಳಿಗೆ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಮಾಡುವ ಸಂಪೂರ್ಣ ವೆಚ್ಚವನ್ನು ದಾನಿಗಳು / ಸಂಸ್ಥೆಗಳು ಭರಿಸಬೇಕು. ಸರ್ಕಾರದಿಂದ ಈ ಯೋಜನೆಗಳಿಗೆ ಯಾವುದೇ ರೀತಿಯ ಆರ್ಥಿಕ ಸಹಾಯವನ್ನು ಅಪೇಕ್ಷಿಸುವಂತಿಲ್ಲ. ಸರ್ಕಾರದಿಂದ ಅಗತ್ಯಬೀಳುವ ಶಿಕ್ಷಕರನ್ನು ಒದಗಿಸಲಾಗುವುದು.
9. ಕಟ್ಟಡ ನಿರ್ಮಾಣ, ಮೂಲ ಸೌಕರ್ಯ, ಹೆಚ್ಚುವರಿ ಶಿಕ್ಷಕರ ಅಗತ್ಯತೆ, ಇತರೆ ಅಭಿವೃದ್ಧಿ ಕಾರ್ಯಗಳನ್ನು ಒಳಗೊಂಡಂತೆ ಒಂದು ವಿವರವಾದ ಕ್ರಿಯಾಯೋಜನೆಯನ್ನು ಸಲ್ಲಿಸಬೇಕು.
10. ಆಸಕ್ತ ಸಂಸ್ಥೆಗಳು / ವ್ಯಕ್ತಿಗಳು ನಿಗದಿತ ಸಮಯದೊಳಗೆ ತಮ್ಮ ಯೋಜನೆಯನ್ನು ಪೂರ್ಣಗೊಳಿಸಲು ಸಿದ್ಧರಿರಬೇಕು.
11. ಇಂತಹ ಸಂಸ್ಥೆ / ವ್ಯಕ್ತಿಗಳು ತಮ್ಮ ಯೋಜನೆಯ ಅನುಷ್ಠಾನದಲ್ಲಿ ಸಂಪೂರ್ಣ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿರ್ವಹಿಸಬೇಕು ಹಾಗೂ ಸಂಬಂಧಿಸಿದ ಶಾಲೆಯ ಎಸ್.ಡಿ.ಎಂ.ಸಿ ಯ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಬೇಕು.
12. ಪೂರ್ವ ಪ್ರಾಥಮಿಕ ವಿಭಾಗವನ್ನು ಪ್ರಾರಂಭಿಸಿ, ಅಗತ್ಯ ಮೂಲಭೂತ ಸೌಕರ್ಯ ಮತ್ತು ಅತಿಥಿ ಶಿಕ್ಷಕರು ಮತ್ತು ಆಯಾಗಳನ್ನು ನೇಮಕ ಮಾಡಿಕೊಂಡು ಅವರಿಗೆ ಎರಡು ವರ್ಷದ ಅವಧಿಯವರೆಗೆ ನಿಯಮಾನುಸಾರ ಗೌರವ ಸಂಭಾವನೆಯನ್ನು ಪಾವತಿಸಲು ಸಿದ್ಧರಿರಬೇಕು.
13. ICT-ಚಟುವಟಿಕೆಗಳಾದ ಸ್ಮಾರ್ಟ್ ಕ್ಲಾಸ್, ಕಂಪ್ಯೂಟರ್ ಕೊಠಡಿ ಮತ್ತು ಮಕ್ಕಳ ಸಂಖ್ಯೆಗನುಗುಣವಾಗಿ ಕಂಪ್ಯೂಟರ್‌ಗಳನ್ನು ಒದಗಿಸಲು ಸಿದ್ಧರಿರಬೇಕು.

14. ಶಾಲೆಗಳಿಗೆ ಅಗತ್ಯವಿರುವ ಬೋಧನಾ ಕೊಠಡಿಗಳು, ಪ್ರಯೋಗಾಲಯ ಕೊಠಡಿಗಳು, ಗ್ರಂಥಾಲಯ ಕೊಠಡಿಗಳು, ಕ್ರೀಡಾ ಕೊಠಡಿಗಳು, ಸಭಾಭವನ, ಭೋಜನಾಲಯ ಕೊಠಡಿ, ಶುದ್ಧಕುಡಿಯುವ ನೀರಿನ ಘಟಕ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಿದ್ಧರಿರಬೇಕು.
15. ಸಂಸ್ಥೆ/ವ್ಯಕ್ತಿಗಳು ಇಚ್ಛಿಸಿದಲ್ಲಿ ತಾವು ಅಭಿವೃದ್ಧಿಪಡಿಸಿದ ಶಾಲೆಗಳಿಗೆ ತಾವು ಸೂಚಿಸಿದ ಹೆಸರನ್ನು ಇಡಲು ಪ್ರಸ್ತಾಪಿಸಬಹುದು. ಈ ಕುರಿತು ಸರ್ಕಾರವು ಪರಿಗಣಿಸುತ್ತದೆ.

ಈ ಮೇಲ್ಕಂಡ ಅಂಶಗಳಿಗೆ ಬದ್ಧರಾಗಿ ಸರ್ಕಾರದ ಆಶಯ ಮತ್ತು ನೀತಿಗೆ ಕ್ರಿಯಾಶೀಲ ಸಮುದಾಯದ ಸಹಭಾಗಿತ್ವದಲ್ಲಿ ಉತ್ತಮಗುಣಮಟ್ಟದ ಕಲಿಕೆಯನ್ನು ಒದಗಿಸುವ ಯಾವುದೇ ಪ್ರಯತ್ನಗಳಿಗೆ ಬೆಂಬಲವಾಗಿ ನಿಂತು ಸರ್ಕಾರವು ಈಗಾಗಲೇ ನಿಗದಿಪಡಿಸಿರುವ ಮಾನದಂಡಗಳನುಸಾರ ಕೆ.ಪಿ.ಎಸ್. ಶಾಲೆಗಳನ್ನು ಪ್ರಾರಂಭಿಸಲು ವ್ಯಕ್ತಿಗಳು / ಸಂಸ್ಥೆಗಳು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ತಮ್ಮ ನಂಬುಗೆಯ,

ಹೆಚ್. ಎಸ್. [signature] 27/1/2021

(ಹೆಚ್.ಎಸ್. ಶಿವಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ,

(ಪ್ರಾಥಮಿಕ ಶಿಕ್ಷಣ) ಶಿಕ್ಷಣ ಇಲಾಖೆ.

ಇವರಿಗೆ:

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು.
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ.
6. ರಾಜ್ಯದ ಎಲ್ಲಾ ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ,
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ / ಮಾಹಿತಿ ಕೇಂದ್ರ,

ಪ್ರತಿ(ಮಾಹಿತಿಗಾಗಿ):

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿ.

3. ಸರ್ಕಾರದ ಅಪರ ಕಾರ್ಯದರ್ಶಿ(ಆಡಳಿತ), ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಸಹಾಯಕ.

4. ಸರ್ಕಾರದ ಉಪ ಕಾರ್ಯದರ್ಶಿ(ಸೇವೆಗಳು-1 ಮತ್ತು 2), ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಸಹಾಯಕರು.